ಡಿಡಬ್ಲ್ಯು-1
ಓ.ಎಸ್ 85/2018

ದಿನಾಂಕಃ 19.01.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎನ್ ಆರ್ ವಾದಿಗಳ ಪರ ವಕೀಲರಿಂದಃ ನನ್ನ ಪತಿಯ ತಂದೆಯ ಹೆಸರು ಕರಿಯಪ್ಪ. ಕರಿಯಪ್ಪನಿಗೆ 3 ಜನ ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ. ಕರಿಯಪ್ಪನಿಗೆ ಚಿಕ್ಕಪ್ಪ ಮತ್ತು ನಾಗೇಂದ್ರಪ್ಪ ಇಬ್ಬರು ಮಕ್ಕಳು ಅಂದರೆ ಸರಿ. ನನ್ನ ಪತಿ ಚಿಕ್ಕಪ್ಪನಿಗೆ ಇಬ್ಬರು ಪತ್ನಿಯರು ಅಂದರೆ ಸರಿಯಲ್ಲ, ನಾನೊಬ್ಬಳೇ ಪತ್ನಿ. ಮೃತ ಶಾಂತಮ್ಮ ನನ್ನ ಪತಿಯ ಮೊದಲನೇ ಪತ್ನಿ ಅಂದರೆ ಸರಿಯಲ್ಲ. 1 ನೇ ವಾದಿ ರೇಣುಕಮ್ಮ ಇವರು ಶಾಂತಮ್ಮನ ಒಬ್ಬಳೇ ಮಗಳು ಅಂದರೆ ಗೊತ್ತಿಲ್ಲ. 2 ನೇ ವಾದಿ ನನಗೆ ಮೊಮ್ಮಗಳು ಆಗಬೇಕು. 2 ನೇ ವಾದಿಯು 1 ನೇ ವಾದಿಯ ಮಗಳು ಅಂದರೆ ಗೊತ್ತಿಲ್ಲ. ನನಗೆ ನಿಂಗಪ್ಪ ಮತ್ತು ಕರಿಯಪ್ಪ ಇಬ್ಬರು ಗಂಡು ಮಕ್ಕಳು ಅಂದರೆ ಸರಿ. ನಿಂಗಪ್ಪ ತೀರಿಕೊಂಡಿದ್ದಾನೆ ಅಂದರೆ ಸರಿ. ನಿಂಗಪ್ಪನ ಪತ್ನಿ ಚೆನ್ನಮ್ಮ ಅಂದರೆ 2 ನೇ ವಾದಿ ಅನ್ನುವುದು ಸರಿ. ಕರಿಯಪ್ಪನ ಪತ್ನಿ ಪ್ರತಿವಾದಿ 17 ಅಂದರೆ ಸರಿ.

2. ನಾಗೇಂದ್ರಪ್ಪನಿಗೆ ತಿಮ್ಮಕ್ಕ ಮತ್ತು ನಾಗಮ್ಮ ಇಬ್ಬರು ಪತ್ನಿಯರು ಅಂದರೆ ಸರಿ. ಪ್ರತಿವಾದಿ 2 ರಿಂದ 4 ರವರು ತಿಮ್ಮಕ್ಕನ ಮಕ್ಕಳು ಅಂದರೆ ಸರಿ. ನಾಗಮ್ಮನಿಗೆ ಪ್ರತಿವಾದಿ 6 ಒಬ್ಬಳೇ ಮಗಳು ಅಂದರೆ ಸರಿ. ನಮ್ಮ ಮನೆತನದ ಮೂಲ ಪುರುಷ ಕರಿಯಪ್ಪ ಅಂದರೆ ಸರಿ. ನಾವೆಲ್ಲರೂ ಆತನ ವಾರುಸುದಾರರು ಅಂದರೆ ಸರಿ. ನಾವೆಲ್ಲರೂ ಒಂದೇ ಕುಟುಂಬದವರು ಅಂದರೆ ಸರಿ, ಆದರೆ ಬೇರೆ ಇದ್ದೇವೆ.

3. ದಾವಾ ಅನುಸೂಚಿ 1, 2 ಮತ್ತು 4 ಆಸ್ತಿಗಳನ್ನು ಕಾನ ಚಿಕ್ಕಪ್ಪ ಅಲಿಯಾಸ ಗೊಲ್ಲರ ಚಿಕ್ಕಪ್ಪ ಇವರಿಗೆ ಸರ್ಕಾರ ಮಂಜೂರು ಮಾಡಿರುತ್ತದೆ ಅಂದರೆ ಸರಿ. ದಿನಾಂಕಃ 27.09.2016 ರಂದು ಈ ಮೂರು ಆಸ್ತಿಗಳನ್ನು ನನ್ನ ಹೆಸರಿಗೆ ಪಹಣಿ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿ. ದಾವಾ ಅನುಸೂಚಿ 3 ನ್ನು 1982-83 ರಲ್ಲಿ ಸರ್ಕಾರವು ನಾಗೇಂದ್ರಪ್ಪನವರ ಹೆಸರಿನಲ್ಲಿ ಮಂಜೂರು ಮಾಡಿರುತ್ತದೆ ಅಂದರೆ ಸರಿ.

ತಿಮ್ಮಕ್ಕ ಮತ್ತು ನಾಗಮ್ಮ ಇವರು ಈ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಅಂದರೆ ಸರಿ. ನಾನು, ತಿಮ್ಮಕ್ಕ ಮತ್ತು ನಾಗಮ್ಮ ಈ ರೀತಿ ದಾವಾ ಅನುಸೂಚಿ 1 ರಿಂದ 4 ಖಾತೆ ಬದಲಾವಣೆ ಮಾಡಿಸಿಕೊಂಡಿರುವುದು 2 ನೇ ವಾದಿಗೆ ಗೊತ್ತಿಲ್ಲ ಅಂದರೆ ಸರಿ.

4. ದಾವಾ ಆಸ್ತಿಗಳು ಒಂದೇ ಕುಟುಂಬದ ಅಸ್ತಿಗಳು ಅಂದರೆ ಸರಿ. ನಾಗೇಂದ್ರಪ್ಪ ಮತ್ತು ಚಿಕ್ಕಪ್ಪ ಒಟ್ಟು ಕುಟುಂಬದಲ್ಲಿದ್ದಾಗ ಸರ್ಕಾರವು ದಾವಾ ಅನುಸೂಚಿ 1 ರಿಂದ 4 ಆಸ್ತಿಗಳನ್ನು ನೀಡಿರುತ್ತದೆ ಅಂದರೆ ಗೊತ್ತಿಲ್ಲ. ದಾವಾ ಅನುಸೂಚಿ 5 ನನ್ನ ಮಾವ ಕರಿಯಪ್ಪನ ಆಸ್ತಿ ಅಂದರೆ ಸರಿಯಲ್ಲ. ನಾಗೇಂದ್ರಪ್ಪ ಮತ್ತು ಚಿಕ್ಕಪ್ಪ ಸುಮಾರು 7-8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಾಗೇಂದ್ರಪ್ಪ ಮತ್ತು ಚಿಕ್ಕಪ್ಪ ತೀರಿಕೊಳ್ಳುವ ಸುಮಾರು 10 ವರ್ಷಗಳ ಹಿಂದಿನವರೆಗೆ ಒಂದೇ ಕುಟುಂಬದಲ್ಲಿದ್ದರು. ದಾವಾ ಆಸ್ತಿಗಳ ಪಾಲು ವಿಭಾಗವಾಗಿಲ್ಲ ಅಂದರೆ ಸರಿಯಲ್ಲ. ಸುಮಾರು 20 ವರ್ಷಗಳ ಹಿಂದೆ ಪಾಲು ವಿಭಾಗವಾಗಿದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.